

# ಮೊಸಳೆ ತೊಗಟೆಯ ಮರ

■ ಎಚ್‌.ಎಸ್‌. ನವೀನ ಕುಮಾರ್

ಭದ್ರಾ ಸಂರಕ್ಷಿತ ಅರಣ್ಯದಲ್ಲಿ ಜೀಪ್ ಸಫಾರಿ ಹೋಗುವಾಗ ಬೃಹತ್ ಗಾತ್ರದ ‘ಮೊಸಳೆ ತೊಗಟೆಯ ಮರ’ (Crocodile bark tree) ಅಥವಾ ‘ಕರಿಮತ್ತಿ’ ಕಣ್ಣಿಗೆ ಬಿತ್ತು.

ಈ ಮರದ ಮೊಸಳೆಯ ಚರ್ಮದಂತೆ ಕಾಣಿಸುವುದರಿಂದ, ಇದಕ್ಕೆ ‘ಮೊಸಳೆ ತೊಗಟೆಯ ಮರ’ ಎನ್ನುವ ಹೆಸರು ಬಂದಿದೆ. ಸುಮಾರು 30 ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುವ ಈ ಗಗನಚುಂಬಿ ಮರ, ಹಲವು ವೈಶಿಷ್ಟ್ಯಗಳ ಆಗರ. ಇದರ ವೈಜ್ಞಾನಿಕ ಹೆಸರು ‘ಟರ್ಮಿನೇಲಿಯಾ ಎಲಿಪ್ಟಿಕಾ’.

ಸುಮಾರು ಒಂದು ಮೀಟರ್ ಗಾತ್ರದ ಅಗಾಧ ಸುತ್ತಳತೆ ಹೊಂದಿರುವ ಈ ಮರ, ತನ್ನ ಕಾಂಡದೊಳಗೆ ಅಪಾರ ಪ್ರಮಾಣದ ನೀರನ್ನು ಸಂಗ್ರಹಿಸಿ ಇಟ್ಟುಕೊಂಡಿರುತ್ತದೆ. ಈ ನೀರನ್ನು ಹೊಟ್ಟೆನೋವಿಗೆ ಔಷಧಿಯಾಗಿ ಬಳಸುತ್ತಾರೆ. ಮರದ ತೊಗಟೆ ಅತಿಸಾರಭೇದಿಗೆ ಔಷಧಿಯಾಗಿ ಬಳಕೆಯಾಗುತ್ತದೆ. ಈ ಬಹು ಉಪಯೋಗಿ ಮರದ ಎಲೆಗಳು ಕೆಲವು ಬಗೆಯ ರೇಷ್ಮೆಹುಳುಗಳಿಗೆ ಆಹಾರ. ಪೀಠೋಪಕರಣಗಳ ತಯಾರಿಕೆಗೆ ಮತ್ತಿ ಮರದ ಬಳಕೆ ಎಲ್ಲರಿಗೂ ಗೊತ್ತಿರುವ ವಿಷಯ.



‘ಮೊಸಳೆ ತೊಗಟೆಯ ಮರ’ಕ್ಕೆ ಸಾಂಸ್ಕೃತಿಕ–ಧಾರ್ಮಿಕ ಇತಿಹಾಸವೂ ಇದೆ. ಗೌತಮ ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದಂತೆ, 28ನೇ ತಿಸ್ಸಾ ಬುದ್ಧನಿಗೆ ಕರಿಮತ್ತಿ ಮರದ ಕೆಳಗೆ ಜ್ಞಾನೋದಯವಾಯಿತು ಎಂಬುದು ಬೌದ್ಧ ಧರ್ಮೀಯರ ನಂಬಿಕೆ. ಹೀಗೆ ಶತಶತಮಾನಗಳಿಂದಲೂ ಮಾನವನಿಗೆ ಉಪಯೋಗಿಯಾಗಿರುವ ಈ ಮರ ‘ನೀನಾರಿಗಾದೆಯೋ ಹುಲುಮಾನವ?’ ಎಂದು ನಮ್ಮನ್ನು ಪ್ರಶ್ನಿಸುವಂತೆ ಮುಗಿಲೆತ್ತರಕ್ಕೆ ಬೆಳೆದುನಿಂತಿದೆ.

ಪ್ರತಿಕ್ರಿಯಿಸಿ: feedback@sudha.co.in

